ಸೆಕ್ಸುವಲ್ ಹೆರಾಸ್ಮೆಂಟ್ ಕೇಸ್‌ನ್ಯಾಗ ಒಳಗ ಹಾಕಸ್ತೇನಿ" ಅಂತ ಕೂತಬಿಟ್ಲಂತ. ಕಂಪ್ಲೇಂಟೂ ಕೊಟ್ಲಂತ. ಅಲ್ಲಿ ಕಾನೂನು ಎಷ್ಟು ಕಠಿಣದ ಅಂತ ನಿನಗೊತ್ತದಲಾ. ಉಳದಾವ್ರೆಲ್ಲಾ "ಪೊಲೀಸು, ಕೋರ್ಟು ಅಂತ ಗದ್ಲ ಮಾಡಕೊಂಡ್ರ ಸುಮ್ಮನ ತ್ರಾಸು. ನೀವು ರಾಜೀನಾಮೆ ಕೊಟ್ಟು ಬ್ಯಾರೇ ನೌಕರಿ ಹಿಡಿರಿ" ಅಂದ್ರಂತ. ಆದ್ರ ಈ ಗದ್ಲ ಮುಗಿಯೋತನಕಾ ಬ್ಯಾರೇ ಕಡೆ ನೌಕರಿ ಮಾಡ್ಲಿಕ್ಕೆ ಬರೂದುಲ್ಲ. ಇಂವಾ ಒಂದಿವಸಾ ನನಗೆಲ್ಲಾ ಹೇಳಿ ಅತ್ತಾ. ಹೆಂಡ್ತಿಗೂ ಹೇಳಿಲ್ಲ ಅಂದಾ. 'ಫ್ರೆಂಡ್ಸ್ ಬೆಂಗಳೂರಾಗ ಬಿಸಿನೆಸ್ ಮಾಡ್ತಾರ. ನಾನೂ ಬಂದಬಿಡ್ತೇನಿ. ಒಂದ ಕೋಟಿ ಇನ್ವೆಸ್ಟ್ ಮಾಡಬೇಕಾಗ್ತದ. ವ್ಯವಸ್ಥಾ ಮಾಡ್ರಿ' ಅಂದಾ. ನಾನೂ ಅವನ ಅಳು ನೋಡಲಾರ್ದನ "ಬನ್ನೇರಘಟ್ಟದ ಮನಿ ಮಾರಿಬಿಡೋಣ. ಈಗ ಅದು ಭಾಳ ಡೆವಲಪ್ ಆಗೇದ. ರೊಕ್ಕ ಬರ್ತಾವ. ನೀ ಕಾಳಜಿ ಬಿಟ್ಟ ಬಾ" ಅಂದಬಿಟ್ಟೆ. ಇಲ್ಲಾರ ನಾ ಒಂದ ಕೋಟಿ ಎಲ್ಲಿಂದ ತರ್ಲಿ?

ನಿಮ್ಮ ಕಾಕೂಗ ಸಾವಕಾಶಾಗಿ ಈ ಎಲ್ಲಾ ಸುದ್ದಿ ಹೇಳಿದೆ. ಮಗನ ಮ್ಯಾಲಿನ ಪ್ರೀತಿಗೆ ಒಪಗೋತಾಳ ಅಂತ ಮಾಡಿದ್ರ ಹುಲಿಗತೆ ಮೈಮ್ಯಾಲೆ ಏರಿದ್ಲು ನೋಡು. 'ಏನ ಬೇಖಾದ್ದಾದರೂ ನಾ ಮನಿ ಮಾರಂಗಿಲ್ಲ. ನಾ ಕಡಿ ಕಾಲಕ್ಕ ಅಲ್ಲೇ ಇರಾಕಿ. ಅಂವ ಬಿಸಿನೆಸ್ ಮಾಡ್ತಿದ್ರ ತನ್ನ ರೊಕ್ಕದ ವ್ಯವಸ್ಥಾ ಮಾಡಕೊಳ್ಳಿಕ್ಕೆ ಹೇಳ್ರಿ. ಹೆಂಡ್ತಿನ್ನ ನೌಕರಿಗೆ ಕಳಸ್ಲಿಕ್ಕೆ ಹೇಳ್ರಿ. ಬರೇ ಮೇಕಪ್ ಮಾಡಕೊಂಡು ತಿನಕೋತ ಕೂಡ್ತಾಳ' ಅಂತ ಉರದು ಬಿದ್ಲು. ಇದನ ನಾ ಅಜಯಗ ಹೇಳಿದ್ರ ಅಂವಾ 'ನಿಮ್ಮ ಭರೋಸಾ ಮ್ಯಾಲೆ ರಿಸೈನ್ ಮಾಡಿದೆ. ಈಗ ನೋಟಿಸ್ ಪೀರಿಯಡ್ ಸರ್ವ್ ಮಾಡ್ಲಿಕ್ಕತ್ತೇನಿ. ಸೆಟಲ್ಮೆಂಟ್ ಅಂತ ಗ್ರೇಸಿಗೆ ರೊಕ್ಕಾನೂ ಕೊಟ್ಟೇನಿ. ಗೆಳೆಂದರ ಜೋಡಿ ಬಿಸಿನೆಸ್ ಅಗ್ರೀಮೆಂಟ್ ಸೈನ್ ಮಾಡೇನಿ. ಮೊದಲ ದೊಡ್ಡ ಪೆಟ್ಟು ತಿಂದು ಹಣ್ಣಾಗೇನಿ. ನನ್ನ ಹೆಂಡ್ತಿಗೆಲ್ಲಾ ಗೊತ್ತಾತಂದ್ರ ಬಿಟ್ಟ ಹೋಗ್ತಾಳ. ಅದಕ್ಕ... ರೊಕ್ಕದ ವ್ಯವಸ್ಥಾ ಆಗ್ಲಿಲ್ಲಾಂದ್ರ ಹೆಂಡ್ತಿ ಮಕ್ಕಳಿಗಷ್ಟು ವಿಷಾ ಕೊಟ್ಟು, ನಾನೂ ಕುಡದು ಎಲ್ಲಾರೂ ಸತ್ತ ಹೋಗ್ತೇವಿ' ಅಂತ ಜೋರಾಗೇ ಹೇಳಿದ. ನಿಮ್ಮ ಕಾಕೂಗ, 'ವಯಸ್ಸಾತು. ಇನ್ನ ನಮ್ಮದೇನದ? ಇರಾಂವ ಒಬ್ಬಾಂವನ ಮಗಾ. ಮುಂದರೆ ಅಂವಗ ಕೊಡೋದಲಾ. ಈಗ ಕೊಟ್ಟರ ಉಪಯೋಗ ಆಗ್ತದ' ಅಂತ ಗಿಳಿಗೆ ಹೇಳಿಧಂಗ ಹೇಳಿದೆ. ಕೇಳಲೇ ಇಲ್ಲ. 'ಅಂವಾ ಸತ್ತರೂ ಅಡ್ಡಿಯಿಲ್ಲ. ನಾ ಮನಿ ಮಾರಾಂಗಿಲ್ಲ. ಈಗ ನಾವು ಮೂರು ತಿಂಗಳು ಅಂವನ ಕಡೆ ಹೋದರ ಹದಿನೈದು ದಿವ್ಸದಾಗನ ಸೊಸಿಗೆ ಬ್ಯಾಸರಾಗ್ತದ. 'ನಿಮ್ಮ ಜೋಡಿ ಕಾಯಮ ಇರ್ಲಿಕ್ಕಾಗೂದುಲ್ಲ' ಅಂತ ಹೇಳಿಬಿಟ್ತಾಳ. ಮುಪ್ಪಿನತನಕ್ಕ ನಮಗೇನಾರೆ ಆಸರ ಬೇಕಲಾ? ಎಲ್ಲಾ ಮಾರಿ ಕೊಟ್ಟು ಕಳಕೊಂಡು ಪರದೇಶಿಗತೆ ಕೂಡೋದು ಬ್ಯಾಡಾ. ಅಂವಾ ತಾನ ಅರ್ಧಾ ರೊಕ್ಕಾ ತುಂಬಿದ ಈ ಮನ್ಯಾಗ ಇರವಲ್ಯಾಕ. ನಾವು ಆ ಸಣ್ಣ ಮನ್ಯಾಗ ಆರಾಮ ಇರೋಣು' ಅಂತ ನನಗ ಉಪದೇಶ ಮಾಡಿಬಿಟ್ಲು. ಒಂದ ರೀತೀಲೆ ಅಕಿ ಹೇಳಿದ್ದು ಖರೆ ಇತ್ತು. ಆದರ ಮಗನ ಸಂಸಾರ... ನಾ ಏನ ಹೇಳಿದ್ರೂ ಅಕಿ ಕೇಳ್ಲಿಲ್ಲ. ಮಗ ಎಷ್ಟ ಸರೆ ಫೋನ್ ಮಾಡಿದ್ರೂ ಮಾತಾಡ್ಲಿಲ್ಲ. ಇಬ್ಬರ ಜಗ್ಗಾಟದಾಗ ನಾ ಸೋತು ಸುಣ್ಣಾದೆ.

ಅವತ್ತ... ನಾನ ನಂದಿಗೆ ಹೋಗೋಣಂತ ಅಕಿನ್ನ ಕರಕೊಂಡು ಬಂದೆ. ಊಟಾ ಮಾಡಿ ಇಬ್ಬರೂ ಎಲ್ಲಾ ಕಡೆ ಕೈ ಘಟ್ಟ್ಯಾಗಿ ಹಿಡಕೊಂಡು ಅಡ್ಡ್ಯಾಡಿದ್ವಿ. 'ಮದಿವ್ಯಾದ ಹೊಸತಾಗಿ ಹಿಂಗ ಬಂದು ಓಡ್ಯಾಡತಿದ್ವೆಲಾ...' ಅಂತ ಹಂಗೆ... ಜಾರಿದ್ಲು. ಚೀರಿದ್ಲು. ನಾ ಜೋರಾಗಿ ವದರಿ ಬ್ಯಾರೇದಾವ್ರನ ಕರದೆ. ಖರೆ ನಾ ಕೈ ಹಿಡಿಲಿಕ್ಕೆ ಹೋಗ್ಲಿಲ್ಲ. ಅಕಿ ಪಾತಾಳ ಕಂಡ್ಲು" ಎನ್ನುತ್ತ